## ‘ನಟರಾಜ ಸರ್ವಿಸ್’ಗೆ ಪುನೀತ್ ಪವರ್



ಇತ್ತೀಚಿನ ವರ್ಷಗಳಲ್ಲಿ ಕನ್ನಡ ಚಿತ್ರರಂಗದ ಯಶಸ್ವಿ ನಿರ್ದೇಶಕರಲ್ಲಿ ಒಬ್ಬರಾದ ಪವನ್ ಒಡೆಯರ್ ಈಗ ‘ನಟರಾಜ ಸರ್ವಿಸ್’ ಮೂಲಕ ಸುದ್ದಿಯಲ್ಲಿದ್ದಾರೆ. ಚಿತ್ರೀಕರಣ ಮುಗಿಸಿ, ತೆರೆಕಾಣಿಸಲು ಅಂತಿಮ ಹಂತದ ಸಿದ್ಧತೆಯಲ್ಲಿರುವ ಚಿತ್ರತಂಡ ವಿಭಿನ್ನ ಪ್ರಚಾರ ತಂತ್ರಗಳಿಂದಲೂ ಗಮನ ಸೆಳೆಯುತ್ತಿದೆ.

ಪುನೀತ್ ರಾಜ್‌ಕುಮಾರ್ ‘ನಟರಾಜ ಸರ್ವಿಸ್’ನ ಇತ್ತೀಚಿನ ಆಕರ್ಷಣೆ. ಚಿತ್ರದ ಶೀರ್ಷಿಕೆ ಗೀತೆಯನ್ನು ಪುನೀತ್‌ರಿಂದ ಹಾಡಿಸುವ ಮೂಲಕ ಚಿತ್ರಕ್ಕೆ ಮತ್ತಷ್ಟು ರಂಗು ತುಂಬುವ ಪ್ರಯತ್ನವನ್ನು ನಿರ್ದೇಶಕರು ನಡೆಸಿದ್ದಾರೆ. ‘ಪೆಟ್ರೋಲ್ ಮುಗಿದರೆ ನಟರಾಜ ಸರ್ವಿಸ್ / ಪಂಕ್ಚರ್ ಆದ್ರೆ ನಟರಾಜ ಸರ್ವಿಸ್ / ಲವ್ ಕೈ ಕೊಟ್ಟು ಹೋದ್ರೆ ನಟರಾಜ ಸರ್ವಿಸ್’ ಎನ್ನುವ ಶೀರ್ಷಿಕೆಯ ಗೀತೆಯನ್ನು ಅನೂಪ್ ಸೀಳಿನ್ ಸಂಗೀತ ಸಂಯೋಜನೆಯಲ್ಲಿ ಪುನೀತ್ ಇತ್ತೀಚೆಗಷ್ಟೆ ಹಾಡಿದ್ದಾರೆ. ಪ್ರೇಮದ ಕಾವಿನೊಂದಿಗೆ ವಿನೋದದ ಸ್ಪರ್ಶವೂ ಇರುವ ಈ ಗೀತೆಯನ್ನು ಪವನ್ ಅವರೇ ರಚಿಸಿರುವುದು ವಿಶೇಷ.

ಶರಣ್ ಹಾಗೂ ಮಯೂರಿ ‘ನಟರಾಜ ಸರ್ವಿಸ್’ ಚಿತ್ರದ ನಾಯಕ–ನಾಯಕಿ. ತಮ್ಮ ಈವರೆಗಿನ ಚಿತ್ರಗಳಿಂತಲೂ ಭಿನ್ನವಾದ ಕಥೆ ಹಾಗೂ ಪಾತ್ರಪೋಷಣೆ ಈ ಚಿತ್ರದಲ್ಲಿ ಎನ್ನುವ ಶರಣ್, ಸಿನಿಮಾದ ಬಗ್ಗೆ ಪ್ರೇಕ್ಷಕರ ಪ್ರತಿಕ್ರಿಯೆ ತಿಳಿಯುವ ಕಾತರದಲ್ಲಿದ್ದಾರೆ. ‘ಕೃಷ್ಣಲೀಲಾ’ ಖ್ಯಾತಿಯ ಮಯೂರಿಗೆ ಕೂಡ ಈ ಸಿನಿಮಾದ ಮೂಲಕ ಪ್ರೇಕ್ಷಕರ ಮನಸ್ಸು ಗೆಲ್ಲುವ ಆಸೆ.

ಎನ್.ಎಸ್. ರಾಜ್‌ಕುಮಾರ್ ‘ನಟರಾಜ ಸರ್ವಿಸ್’ ನಿರ್ಮಾಪಕರು. ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಸಮಾರಂಭ ಹಾಗೂ ಅದರ ಬೆನ್ನಿಗೆ ಚಿತ್ರವನ್ನು ತೆರೆಗಾಣಿಸುವ ಪ್ರಯತ್ನದಲ್ಲಿ ಚಿತ್ರತಂಡ ಬಿಜಿಯಾಗಿದೆ.



## ಮಳೆಯ ಹೊಸ ಋತು!

ಮಳೆಯಲ್ಲಿ ತೋಯ್ದು ತೊಪ್ಪೆಯಾಗಿರುವ ನೇಹಾ ಶೆಟ್ಟಿ ಅವರೀಗ, ಆ ಮಳೆಯ ಸವಿನೆನಪುಗಳ ನೇವರಿಕೆಯ ಸುಖದಲ್ಲಿದ್ದಾರೆ. ಅವರದು ‘ಮುಂಗಾರು ಮಳೆ–2’ ಸಿನಿಮಾದ ಸಂಭ್ರಮ.

‘ಮುಂಗಾರು ಮಳೆ–2’ ಶಶಾಂಕ್ ನಿರ್ದೇಶನದ ಸಿನಿಮಾ. ಈ ಚಿತ್ರದಲ್ಲಿ ಗಣೇಶ್‌ಗೆ ಜೋಡಿಯಾಗಿ ನೇಹಾ ನಟಿಸಿದ್ದಾರೆ. ನಾಯಕಿಯರ ಪಾತ್ರಚಿತ್ರಣದಲ್ಲಿ ಶಶಾಂಕ್ ಎತ್ತಿದಕೈ. ಹಾಗಾಗಿ, ‘ಮುಂಗಾರು ಮಳೆ–2’ ತಮ್ಮ ವೃತ್ತಿಜೀವನದಲ್ಲಿ ಪ್ರಮುಖ ಚಿತ್ರವಾಗಬಹುದು ಎನ್ನುವ ನಿರೀಕ್ಷೆ ನೇಹಾ ಅವರದು. ಚಿತ್ರಕಥೆಯನ್ನು ಪಠ್ಯದಂತೆ ಅಭ್ಯಾಸ ಮಾಡಿರುವ ಅವರಿಗೆ, ಶಶಾಂಕ್‌ರಂಥ ಜಾಣ ನಿರ್ದೇಶಕರೊಂದಿಗೆ ಕೆಲಸ ಮಾಡಿದ ಖುಷಿಯಿದೆ.

ಇತ್ತೀಚೆಗಷ್ಟೇ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಇದರ ಜೊತೆಗೆ ಚಿತ್ರದ ಕುರಿತಾದ ನಿರೀಕ್ಷೆಗಳೂ ಹೆಚ್ಚುತ್ತಿವೆ. ‘ಇದು ಖಂಡಿತವಾಗಿಯೂ ಕನ್ನಡ ಚಿತ್ರರಂಗದ ಪಾಲಿಗೆ ಒಂದು ವಿಶೇಷ ಚಿತ್ರವಾಗಲಿದೆ’ ಎನ್ನುವ ನಿರ್ದೇಶಕ ಶಶಾಂಕ್, ಚಿತ್ರಕಥೆಯ ಗುಟ್ಟು ಮಾತ್ರ ಈವರೆಗೆ ಬಿಟ್ಟುಕೊಟ್ಟಿಲ್ಲ. ನಾಯಕ ಗಣೇಶ್ ಅವರನ್ನು ಹೊರತುಪಡಿಸಿದರೆ ಚಿತ್ರತಂಡದ ತಂತ್ರಜ್ಞರು ಹಾಗೂ ಕಲಾವಿದರು ಬೇರೆಯೇ ಆಗಿದ್ದರೂ, ಯೋಗರಾಜ ಭಟ್‌ರ ‘ಮುಂಗಾರು ಮಳೆ’ಯ ನೆನಪುಗಳೊಂದಿಗೆ ತಮ್ಮ ಸಿನಿಮಾ ತಳಕುಹಾಕಿಕೊಂಡಿದೆ ಹಾಗೂ ಮೂಲ ಚಿತ್ರಕ್ಕಿಂತ ಬೇರೆಯದೇ ನೆಲೆಯಲ್ಲಿ ಸಾಗುತ್ತದೆ ಎನ್ನುವ ವಿಶ್ವಾಸ ಶಶಾಂಕ್ ಅವರದು.

ನೇಹಾ ಅವರ ಜೊತೆಗೆ ಐಂದ್ರಿತಾ ರೇ ಹಾಗೂ ಶ್ರದ್ಧಾ ಶ್ರೀನಾಥ್ ಕೂಡ ‘ಮುಂಗಾರು ಮಳೆ–2’ರ ತಾರಾಗಣದಲ್ಲಿದ್ದಾರೆ. ಸದ್ಯದಲ್ಲೇ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಮಾಡುವ ತಯಾರಿಯಲ್ಲಿ ಶಶಾಂಕ್ ಬಳಗ ತೊಡಗಿಕೊಂಡಿದೆ.